# ಗೀತೆ 5 ನಿಮಿಷಗಳಲ್ಲಿ

## ಗೀತೆಯ ಸಂಕ್ಷಿಪ್ತ ಸಂಗ್ರಹ




ಟಿ. ಬಾಲಕೃಷ್ಣ ಭಟ್
ಕೆ. ಆಶಾ ದಾಸ್

## ಮುಖ ಚಿತ್ರದ ಭಾವಾರ್ಥ

ಬ್ರಹ್ಮಾಂಡದ ಎಲ್ಲಾ ಜ್ಞಾನದ (ನೀಲಾಕಾಶದ) ಮತ್ತು ಜ್ಞಾನಿಗಳ (ನೀಲ ದಳಗಳ) ಸಲಹೆ, ಮಾರ್ಗದರ್ಶನದಲ್ಲಿ, ಗೀತೆಯಂಥಹ (ಬಿಳಿ ತಾವರೆ ) ಶುಭ್ರ ಜ್ಞಾನದ ಸಹಾಯದಿಂದ ವ್ಯಕ್ತಿಯು (ಚಿಕ್ಕ ಹಳದಿ ಹೂವು) ಜ್ಞಾನದ ಮೂಲಕ ಎಚ್ಚೆತ್ತು, ಅರಳಿ, ಭಕ್ತಿಯ ಮೂಲಕ ಸಶಕ್ತನಾಗಿ ಕರ್ಮದ ಮೂಲಕ ಮುಂದುವರಿದು, ಭಗವದ್ ಕೃಪೆಯಿಂದ (ಸಣ್ಣ ವೃತ್ತ ) ಬಾಗಿಲು ತೆರೆಯಲು ದೊಡ್ಡ ಹಳದಿ ಹೂವನ್ನು (ದೇವರು, ಗುರಿ) ತಲುಪುವನು, ಪೂರ್ತಿ ಅರಳಿ ರಮಿಸುವನು. ಈ ರೀತಿ ಯೋಚಿಸಿ ಹಾಗೂ ವರ್ತಿಸಿ ಎಲ್ಲರೂ ತಮ್ಮ ತಮ್ಮ ಗುರಿಗಳನ್ನು ತಪ್ಪದೆ ಮುಟ್ಟಬಲ್ಲರು.

### ಮುಖ್ಯಪದಗಳು

ಗೀತೆ, ಭಗವದ್ಗೀತೆ, ಸಲಹೆ, ಭಕ್ತಿ, ಕೃಪೆ, ಜ್ಞಾನ, ಕರ್ಮ, ಸ್ಥಿತಪ್ರಜ್ಞ, ಗೀತೆಯ ಸಂಕ್ಷಿಪ್ತ ಸಂಗ್ರಹ,ಯೋಗ, ಧ್ಯಾನ, ಪ್ರಾಣಾಯಾಮ

**© ೨೦೧೬, ಡಾ. ಟಿ. ಬಾಲಕೃಷ್ಣ ಭಟ್**

# ಆಮಂತ್ರಣ

ಈ ಪುಸ್ತಕವನ್ನು ಪ್ರಪಂಚದ ವಿವಿಧ ಭಾಷೆಗಳಿಗೆ
ಅನುವಾದಿಸಲು ಸ್ವಯಂಸೇವಕ ಬರಹಗಾರರಿಗೆ
ಸಾದರ ಆಮಂತ್ರಣ. ಅವರ ಭಾವಚಿತ್ರ
ಮತ್ತು ಪರಿಚಯವನ್ನು ಆಯಾ ನಿರ್ದಿಷ್ಟ
ಭಾಷಾ ಆವೃತ್ತಿಗಳಲ್ಲಿ ಅಡಕಗೊಳಿಸಲಾಗುವುದು.

**ಸಂಪರ್ಕ:** : tbalakrishnabhat@gmail.com



# ಗೀತೆ 5 ನಿಮಿಷಗಳಲ್ಲಿ

## ಗೀತೆಯ ಸಂಕ್ಷಿಪ್ತ ಸಂಗ್ರಹ

# ಪರಿವಿಡಿ


ಈ ಕಿರು ಹೊತ್ತಗೆಯ ಬಗ್ಗೆ i

ಮುನ್ನುಡಿ ii

ಪರಿಚಯ 1

ಗೀತೆಯ ಸಂಕ್ಷಿಪ್ತ ಸಂಗ್ರಹ 3

1. ಪ್ರಾರ್ಥನೆ 3
2. ಸಂಕ್ಷಿಪ್ತ ಮಾರ್ಗದರ್ಶನ 3
3. ಜ್ಞಾನ ದರ್ಶನ 4
   - 3.1 ಆತ್ಮ ದರ್ಶನ 4
   - 3.2 ಭಗವತ್ ದರ್ಶನ 5
   - 3.3 ಪ್ರಕೃತಿ ದರ್ಶನ 7
   - 3.4 ಜನ್ಮ ಮೃತ್ಯು ದರ್ಶನ 8
4. ಕರ್ಮ ಸಾಧನಾ ದರ್ಶನ 9
5. ಭಗವತ್ ಪ್ರಸಾದ ಸಾಧನಾ ದರ್ಶನ 11
6. ದಿವ್ಯ ಪ್ರಸಾದ ಸಂಪ್ರಾಪ್ತಿ 12
7. ದಿವ್ಯ ದಿಗ್ದರ್ಶನ 13

ಗೀತೆಯ ಸಂಕ್ಷಿಪ್ತ ಸಂಗ್ರಹ 14

ಸಂಕ್ಷಿಪ್ತ ಶಬ್ದ ಗೀತಾ 19

ಸಂಕ್ಷಿಪ್ತ ಶಬ್ದಗೀತೆ 20

ಸಂಪೂರ್ಣ ಅನುಗ್ರಹ 21

ವಿಶೇಷ ಟಿಪ್ಪಣಿ* 22

ಲೇಖಕರ ಕುರಿತು 24

ಅನುವಾದಿಸಿದವರ ಕುರಿತು 25

ಸೂಚ್ಯಂಕ 26

## ಈ ಕಿರು ಹೊತ್ತಗೆಯ ಬಗ್ಗೆ

ಶ್ರೀಮದ್ಭಗವದ್ಗೀತೆಯು ಜೀವನ ಮತ್ತು ವೃತ್ತಿಯನ್ನು ಜೊತೆಜೊತೆಯಾಗಿ ನಿಭಾಯಿಸುವುದನ್ನು ಮತ್ತು ವಿಕಸಿತಗೊಳಿಸುವುದನ್ನು ತಿಳಿಯಗೊಡುವ, ಎಲ್ಲರಿಗೂ, ಎಲ್ಲ ಕಾಲಕ್ಕೂ, ಜೀವನದ ಎಲ್ಲ ಘಟ್ಟಗಳಲ್ಲಿಯೂ ಸೂಚ್ಯವಾಗಿರುವ ಅತ್ಯಂತ ಪ್ರಾಯೋಗಿಕ, ಆಧ್ಯಾತ್ಮಿಕ ಮತ್ತು ಆಡಳಿತಾತ್ಮಕ ಮಾರ್ಗದರ್ಶಿ. ಈ ಹೊತ್ತಗೆಯು ಮನುಷ್ಯನು ಇದಿರುಗೊಳ್ಳುವ ಸಮಸ್ಯೆಗಳು, ಆತ್ಮನ ಸ್ವಭಾವ, ದೇವರು, ಪ್ರಕೃತಿ, ಜನನ–ಮರಣ, ಕರ್ಮಯೋಗ, ದೈವಕೃಪೆ ಗಳಿಸುವ ವಿಧಾನ, ದೈವೀಪ್ರಸಾದ ಮತ್ತು ದೈವೀಮಾರ್ಗದರ್ಶನಗಳನ್ನು ವಿವರಿಸಿ ಹೇಳುವ ಭಗವದ್ಗೀತೆಯ ಅಧ್ಯಾಯಗಳಿಂದ ಆಯ್ದ ಶ್ಲೋಕಗಳ ಸಂಕ್ಷಿಪ್ತ ಮತ್ತು ಸುಸಂಬದ್ಧವಾಗಿ ಜೋಡಿಸಿರುವ ಸಂಗ್ರಹವಾಗಿದೆ. ಇದನ್ನು ಐದೇ ನಿಮಿಷಗಳಲ್ಲಿ ಓದಿ ಮುಗಿಸಬಹುದಾಗಿದ್ದು ಪ್ರತಿನಿತ್ಯ ಪಠನೆಗೆ ಸೂಕ್ತವಾಗಿದೆ. ಇದನ್ನು ಅರ್ಥವತ್ತಾಗಿ ಅವಲೋಕಿಸುತ್ತಾ ಓದಿದವರು ಗೀತೆಯ ಸಂಪೂರ್ಣ ಪ್ರಯೋಜನವನ್ನು ಮತ್ತು ಸ್ಫೂರ್ತಿಯನ್ನು ಅನುಭವಿಸಬಹುದು (ಓದುಗ ತನ್ನನ್ನು ಬೆಳಗಿಸಿಕೊಳ್ಳುವಂತೆ ಗೀತೆಯು ಶಕ್ತಿಯನ್ನೀಯುವುದು ಮತ್ತು ಉನ್ನತೀಕರಿಸುವುದು). ಕೊನೆಯ ಖಂಡದಲ್ಲಿ ದೇವರು ಎಲ್ಲರನ್ನೂ ಯೋಗಿಗಳಂತೆ ಬಾಳಲು, ಪರಸ್ಪರ ಪ್ರೀತಿ ಮತ್ತು ಪೋಷಣೆಯನ್ನು ನೀಡಲು ಕರೆನೀಡುವ ಎರಡು ಶ್ಲೋಕಗಳಿವೆ. ಕಲಹಗಳಿಂದ ಹರಿದು ಹಂಚಿಹೋಗಿರುವ, ಒತ್ತಡಗಳಿಂದ ತುಂಬಿರುವ ಸಮಕಾಲೀನ ಜಗದಲ್ಲಿ ಇವು ಬಹಳ ಸಮಂಜಸ ಎಂಬುದನ್ನು ಮನಗಂಡು ಇವನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಈ ಪುಸ್ತಕವು ಆಧ್ಯಾತ್ಮಿಕ, ಸಾಮಾಜಿಕ, ಭಾವನಾತ್ಮಕ ಮತ್ತು ವೃತ್ತಿಪರ ಸ್ತರಗಳಲ್ಲಿ ಪ್ರಗತಿಯನ್ನು ಸಾಧಿಸಲು ಪ್ರತಿಯೊಬ್ಬರಿಗೂ ಉಪಯುಕ್ತ ಕೈಪಿಡಿ. ಅದರಲ್ಲೂ ವಿಶೇಷವಾಗಿ ಇದು ಶಾಲಾ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಸೂಕ್ತವಾಗಿದೆ. ಗೀತಾಸಾರವೆಂಬಂತೆ ಒಂದು ಸಂಕ್ಷಿಪ್ತ ಶ್ಲೋಕವನ್ನು ರಚಿಸಿ ಈ ಕೃತಿಯ ಕೊನೆಯಲ್ಲಿ ನೀಡಲಾಗಿದೆ.

# ಮುನ್ನುಡಿ

ಶ್ರೀಮದ್ಭಗವದ್ಗೀತೆ ಅಥವಾ ಗೀತೆ, ಇದೊಂದು ಅತಿ ಅರ್ಥಗರ್ಭಿತ, ಬಹು ಶ್ರೀಮಂತ, ಪ್ರಾಚೀನ, ಆಧ್ಯಾತ್ಮಿಕ ಮಾರ್ಗದರ್ಶಿ. ಇದನ್ನು ಸರ್ವರಿಗೂ, ಸರ್ವಕಾಲಕ್ಕೂ ಉಪಯುಕ್ತವಾದ ಸಾರ್ವತ್ರಿಕ ಸಂವಿಧಾನ ಎನ್ನಬಹುದು. ಶ್ರೀಮದ್ಭಗವದ್ಗೀತೆ ಎಂದರೆ (ಶಬ್ದಾರ್ಥದಲ್ಲಿ 'ಶ್ರೀ' ಎಂದರೆ ಶ್ರೀಮಂತ, 'ಮತ್' ಎಂದರೆ ಬುದ್ಧಿಶಕ್ತಿ, 'ಭಗವತ್' ಎಂದರೆ ಯೋಗಕ್ಷೇಮ, 'ಗೀತೆ' ಎಂದರೆ ವೇಗಗೊಳಿಸು) ಯೋಗಕ್ಷೇಮದೆಡೆಗೆ ವೇಗವಾಗಿ ಕೊಂಡೊಯ್ಯುವ ಶ್ರೀಮಂತ ಜ್ಞಾನ ಎಂಬುದಾಗಿದೆ. ಗೀತೆಯು ನಮ್ಮ ಕಿರಿದಾದ ಜ್ಞಾನವನ್ನು ಮಹಾಜ್ಞಾನದೊಂದಿಗೆ ಜೋಡಿಸಲು ಸಹಕರಿಸುತ್ತದೆ. ಇದು ವ್ಯಕ್ತಿಯ ಜೀವನದಲ್ಲಿ ಅಚ್ಚರಿಗೊಳಿಸುವಂತಹ ಅಭ್ಯುದಯವನ್ನು ಮೂಡಿಸುತ್ತದೆ. ಗೀತೆಯು 700 ಶ್ಲೋಕಗಳನ್ನು ಒಳಗೊಂಡಿದ್ದು 18 ಅಧ್ಯಾಯಗಳಲ್ಲಿ ಪ್ರಸ್ತುತವಾಗಿದೆ. ನಾನು ಇಲ್ಲಿ ಪ್ರತಿಯೊಂದು ಅಧ್ಯಾಯದಿಂದ ಕನಿಷ್ಠ ಒಂದು ಶ್ಲೋಕವನ್ನು ಆಯ್ದುಕೊಂಡ 47 ಶ್ಲೋಕಗಳನ್ನು ಸಂಗ್ರಹಿಸಿದ್ದೇನೆ[1]. ಇವನ್ನು ಅನುಕ್ರಮವಾಗಿ ಏಳು ಸುಸಂಬದ್ಧ ವಿಭಾಗಗಳಲ್ಲಿ ಜೋಡಿಸಿದ್ದೇನೆ.

ಮೊದಲನೆ ವಿಭಾಗವು ದೇವರಿಗೆ ಸಲ್ಲಿಸುವ ಪ್ರಾರ್ಥನೆಯಂತಿದ್ದು ವ್ಯಕ್ತಿಯೋರ್ವನ ಕರುಣಾಜನಕ ಪರಿಸ್ಥಿತಿಯನ್ನು ವರ್ಣಿಸುತ್ತದೆ. ಎರಡನೆ ವಿಭಾಗದಲ್ಲಿ ಭಗವಂತ ಅರ್ಜುನನಿಗೆ ಮಾರ್ಗದರ್ಶನವನ್ನು ಮಾಡುತ್ತ ಎದ್ದು ನಿಂತು ತನ್ನ ಕರ್ತವ್ಯದ ಪಾಲನೆಯನ್ನು ಮಾಡಲು, ಗುರುಜನರನ್ನು ಸಂದರ್ಶಿಸಲು ಮತ್ತು ಜ್ಞಾನಾಭಿಮುಖನಾಗಿ ತನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸೂಚಿಸುತ್ತಾನೆ.

ಮೂರನೇ ವಿಭಾಗವು ಜ್ಞಾನದ ಕುರಿತಾಗಿದ್ದು 4 ಉಪವಿಭಾಗಗಳಾಗಿ ವಿಂಗಡಿಸಲ್ಪಟ್ಟಿರುವುದು. ಮೊದಲನೆಯದರಲ್ಲಿ ಪರಮಾತ್ಮನಿಂದ ಹೊರಹೊಮ್ಮುವ ಅವಿನಾಶಿ ಮತ್ತು ಸನಾತನ ಸ್ವರೂಪದ ಆತ್ಮನ ಬಗೆಗೆ ಹೇಳಲಾಗಿದೆ. ಎರಡನೆ ಉಪವಿಭಾಗವು ಸೃಷ್ಟಿಯ ಕರ್ತೃ, ಪೋಷಕ ಮತ್ತು ಲಯಕರ್ತನಾದ ಭಗವಂತನ ವಿಷಯವನ್ನು ತಿಳಿಸುವಂಥದ್ದು. ತನ್ನ ಗುಣ ವಿಶೇಷಗಳಿಂದ ಜೀವಾತ್ಮನನ್ನು ಆಕರ್ಷಿಸುವ ಮತ್ತು ಬಂಧಿಸುವ ಪ್ರಕೃತಿಯ ಬಗ್ಗೆ ಮೂರನೆಯ ಉಪವಿಭಾಗ. ಕೊನೆಯದಾಗಿ ಹಳೆಯ ಉಡುಪನ್ನು ಬದಲಿಸಿ ಹೊಸತನ್ನು ಧರಿಸುವ ಪ್ರಕ್ರಿಯೆಗೆ ಹೋಲಿಸಲಾಗುವ ಸಾವು ಮತ್ತು ಬದುಕಿನ ವಿಷಯವು ನಾಲ್ಕನೆಯ ಉಪವಿಭಾಗದಲ್ಲಿದೆ. ಓರ್ವನು ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಳ್ಳುತ್ತಾ ಉನ್ನತ ಸ್ಥಿತಿಯನ್ನು ಹೊಂದಬಹುದು, ಹಾಗೆಯೇ ತನ್ನ ಕೃತ್ಯ ಮತ್ತು ವರ್ತನೆಗಳನ್ನು ಪರಿಶುದ್ಧಗೊಳಿಸುತ್ತ ಜನನ ಮರಣದ ಚಕ್ರದಿಂದ ಪಾರಾಗಬಹುದು.

ನಾಲ್ಕನೇ ವಿಭಾಗವು ಕರ್ಮದ ಮೂಲಕ ಪರಿಪೂರ್ಣತೆ ಅಂದರೆ ಕರ್ಮಯೋಗವನ್ನು ವಿಶ್ಲೇಷಿಸುವುದು. ಕರ್ಮವು ವಿಜಯಕ್ಕೆ ಹೆದ್ದಾರಿ. ಫಲಾಪೇಕ್ಷೆಗಳಿಲ್ಲದೆ ಕಾರ್ಯತತ್ಪರನಾಗಿ ಪ್ರಾಣಾಯಾಮ, ಯೋಗ ಮತ್ತು ಧ್ಯಾನದಲ್ಲಿ ತೊಡಗಿಸಿಕೊಳ್ಳುವುದರಿಂದ ಉತ್ಕೃಷ್ಟ ಫಲವು ಲಭಿಸುವುದು. ಐದನೆಯ ವಿಭಾಗವು ದೈವಕೃಪೆಯನ್ನು ಗಳಿಸುವ ಮಾರ್ಗದ ಕುರುತಾಗಿದೆ. ಮನೋತಪ, ಕರ್ಮಫಲಗಳನ್ನು ಭಗವಂತನಿಗೆ ಸಮರ್ಪಿಸುವುದು, ಶ್ರದ್ಧಾಭಕ್ತಿಗಳಿಂದ ಕೂಡಿದ ಆರಾಧನೆ ಹಾಗೂ ಶರಣಾಗತಿಯಿಂದ ದೈವಾನುಗ್ರಹವನ್ನು ಸಂಪಾದಿಸಬಹುದಾಗಿದೆ. ಆರನೇ ವಿಭಾಗದಲ್ಲಿ ನಮ್ಮೊಳಗೆ ಹುದುಗಿರುವ ನ್ಯೂನತೆ, ಭೀತಿ, ದುರ್ಗುಣಗಳು ಇವೇ ಮೊದಲಾದ ರಕ್ಕಸರನ್ನು ನಮ್ಮಿಂದ ದೂರಾಗಿಸಿ ಜ್ಞಾನವನ್ನು ಗಳಿಸಬಹುದು ಮತ್ತು ಸನ್ಮಾರ್ಗವನ್ನು ಹಿಡಿಯಬಹುದು ಎಂಬುದನ್ನು ನೋಡುತ್ತೇವೆ. ಕೊನೆಯದಾಗಿ ಪ್ರೀತಿ, ಸಲಹೆ, ಸ್ಫೂರ್ತಿಯನ್ನು ಹಂಚುತ್ತ ಪರಸ್ಪರ ಪೋಷಣೆ ನೀಡುವಂತೆ ಮತ್ತು ಯೋಗಿಗಳಾಗಿ ಬಾಳುವಂತೆ ಭಗವಂತ ಕರೆನೀಡುತ್ತಾನೆ.

---

[1] ಮೂಲಗ್ರಂಥದಲ್ಲಿ ಅಧ್ಯಾಯ, ಶ್ಲೋಕ ಸಂಖ್ಯೆಗಳನ್ನು ಆಯ್ದ ಪ್ರತಿ ಶ್ಲೋಕಾಂತ್ಯದಲ್ಲಿ ನೀಡಲಾಗಿದೆ. ಮೊದಲ ಸಂಖ್ಯೆಯು ಅಧ್ಯಾಯವನ್ನು ಮತ್ತು ಎರಡನೆಯ ಸಂಖ್ಯೆಯು ಶ್ಲೋಕ ಸಂಖ್ಯೆಯನ್ನು ಸೂಚಿಸುವುದು.

ವಿಭಾಗಗಳಾಗಿ ವಿಂಗಡಿಸಿರುವುದರಿಂದ ಸ್ಪಷ್ಟತೆಯನ್ನು ಮೂಡಿಸುವಲ್ಲಿ ಮತ್ತು ಸ್ವಲ-ಸ್ವಲ್ಪವಾಗಿ ಕಂಠಪಾಠ ಮಾಡುವಲ್ಲಿ ಸಹಾಯವಾಗುವುದು.

ಗೀತೆಯ ಸಾರಾಂಶವನ್ನು ಕಾವ್ಯಾತ್ಮಕವಾಗಿ ಸಂಯೋಜಿಸಿ ಕೊನೆಯಲ್ಲಿ ಅಡಕಗೊಳಿಸಲಾಗಿದೆ. ಇದನ್ನು ಸರಳವಾಗಿ ನೆನಪಿನಲ್ಲಿಡಬಹುದು ಮತ್ತು ನಿರರ್ಗಳವಾಗಿ ಹಾಡಬಹುದು ಅಥವಾ ಬಾಲರಿಗೆ ಸರಾಗವಾಗಿ ಕಲಿಸಿಕೊಡಬಹುದು.

ಈ 47 ಶ್ಲೋಕಗಳ ಸಂಗ್ರಹವನ್ನು ಕಂಠಪಾಠ ಮಾಡಲು, ಓದಲು ಅಥವಾ ಅರ್ಥವನ್ನು ತಿಳಿದುಕೊಳ್ಳಲು ಐದು ನಿಮಿಷಕ್ಕಿಂತಲೂ ಕಡಿಮೆ ಸಮಯ ಸಾಕು. ಕಂಠಪಾಠ ಮಾಡುವುದರಿಂದ ಕಣ್ಮುಚ್ಚಿಕೊಂಡು ತದೇಕಚಿತ್ತರಾಗಿ ಅಭ್ಯಾಸಗೈಯಬಹುದು. ಇಷ್ಟೇ ಅಲ್ಲದೆ, ಎಲ್ಲೇ ಆಗಲಿ, ಯಾವುದೇ ಸಮಯದಲ್ಲಾಗಲಿ, ಗಾಡಿಯನ್ನು ಚಲಾಯಿಸುತ್ತಲೋ, ಸ್ನಾನ ಮಾಡಿಕೊಳ್ಳುತ್ತಲೋ, ಮನೆಗೆಲಸದಲ್ಲಿ ತೊಡಗಿರುವಾಗಲೋ, ಇನ್ನಾವುದೋ ಚಟುವಟಿಕೆಗಳ ನಡುವೆಯೂ ಇವನ್ನು ಹೇಳಬಹುದು. ಇದರಿಂದ ಮನೆಯಲ್ಲಿ ಆಧ್ಯಾತ್ಮದ ಕುಸುಮವು ಬಿರಿದು ದೈವಕೃಪೆಯ ಸುಗಂಧವು ಮನೆಮಂದಿಗೆ, ವಿಶೇಷವಾಗಿ ಮಕ್ಕಳಿಗೆ, ಮುದವನ್ನೀಯುವುದು. ಸಾಮಾನ್ಯವಾಗಿ ಒಬ್ಬಾತನು ಗೀತೆಯ ಕೆಲವು ಅಧ್ಯಾಯಗಳನ್ನು ಕಂಠಪಾಠ ಮಾಡಬಲ್ಲನು. ಸಮಗ್ರ ಗೀತೆಯನ್ನು ಈ ರೀತಿ ವಾಚಿಸಬಲ್ಲವರು ವಿರಳ. ಬಹಳ ಜತನದಿಂದ ಅಯ್ದುಕೊಳ್ಳಲಾದ ಈ 47 ಶ್ಲೋಕಗಳನ್ನು ಮನನ ಮಾಡಿ ಪಠಿಸಿ ಪ್ರತಿಯೊಬ್ಬರೂ ಸಂಪೂರ್ಣ ಗೀತೆಯ ಇಣುಕು ಪಡೆಯುವ ಸದವಕಾಶ ಒದಗಲಿ ಎಂಬುದೇ ಈ ಆಯ್ಕೆಯ ಹಿಂದಿನ ಸದಾಶಯ. ಇದು ಒತ್ತಡಗಳಿಗೆ ರಾಮಬಾಣ ಮತ್ತು ನಮಗೆಲ್ಲರಿಗೆ ಶಕ್ತಿಪ್ರದಾಯಕವಾಗಿದೆ. ಯಾವುದೇ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳವರಾಗಿದ್ದರೂ ಸರಿ, ಇದನ್ನು ಏಕಾಗ್ರ ಚಿತ್ತದಿಂದ ಓದುತ್ತಿದ್ದಂತೆಯೇ ಗೀತೆಯ ರಹಸ್ಯವನ್ನು ಅನುಭವಿಸುವಿರಿ ಮತ್ತು ನಿಮ್ಮೊಳಗಿನ ಆಧ್ಯಾತ್ಮದ ಬೀಜವು ಮೊಳಕೆಯೊಡೆದು ವಿಶ್ವಧರ್ಮಜ್ಞಾನವು ಚಿತ್ತದಲ್ಲಿ ಅನುರಣಿಸುವುದು.

ಇಲ್ಲಿ ಓದಿದ್ದರಲ್ಲಿ ಕಿಂಚಿತ್ತನ್ನಾದರೂ ಗ್ರಹಿಸಿ ದಿನಂಪ್ರತಿ ಆಚರಿಸಿದಿರೆಂದಾದರೆ ಒತ್ತಡದಿಂದ ಮುಕ್ತಿ ಹೊಂದಿ ನೀವು ನಿತ್ಯ ಜೀವನ ಮತ್ತು ವೃತ್ತಿ ರಂಗಗಳಲ್ಲಿ ಸಂಪೂರ್ಣತೆಯನ್ನು ಮತ್ತು ಅತ್ಯುನ್ನತ ಪದವಿಯನ್ನು ಹೊಂದುವಿರಿ. ದೈವಕೃಪೆ ಒದಗಿ ಬಂದು ನೀವು ಐದನೇ ವಿಭಾಗದಲ್ಲಿ ಸೂಚಿಸಿರುವ ಮಾರ್ಗವನ್ನು ಅನುಸರಿಸಿದರೆ ಆತ್ಮಸಾಕ್ಷಾತ್ಕಾರ ಮತ್ತು ದೈವಸಾಕ್ಷಾತ್ಕಾರಗಳನ್ನು ಇಹ ಜನ್ಮದಲ್ಲಿ ಪಡೆದು ಶ್ರೇಷ್ಠವಾದ ಭಾವಪರತೆಯೊಂದಿಗೆ ವಿಮುಕ್ತ ಸ್ಥಿತಿಯಲ್ಲಿ ಬಾಳಬಹುದು. ಸಂತೃಪ್ತ ಜೀವನವು ತನ್ನಿಂದ ತಾನಗಿಯೇ ಹಿಂಬಾಲಿಸಿ ಬರುವುದು.

ಈ ಸಂದರ್ಭದಲ್ಲಿ ನನ್ನ ಅನುಭವವೊಂದನ್ನು ಇಲ್ಲಿ ನಿರೂಪಿಸುತ್ತೇನೆ. ನಾನು ಬಹಳಷ್ಟು ವರ್ಷಗಳಿಂದ ಯೋಗ, ಪ್ರಾಣಾಯಾಮವನ್ನು ಅಭ್ಯಾಸ ಮಾಡುತ್ತಿದ್ದೇನೆ. ಇತ್ತೀಚೆಗೆ ನಾನು ಗೀತೆಯ ಅಧ್ಯಯನ ಮಾಡಿದೆನು ಮತ್ತು ಸಾರಾಂಶವೆಂಬಂತೆ ಈ ಆಯ್ದ ಸಾಲುಗಳ ಕರಡು ಪ್ರತಿಯನ್ನು ತಯಾರಿಸಿದೆನು. ಇವನ್ನು ಕೆಲವು ಬಾರಿ ಓದಿ ಆ ಬಳಿಕ ವಿರಮಿಸಲು ಮುಂದಾದೆನು. ಅಷ್ಟರಲ್ಲಿ ಯಾವುದೇ ಬಾಹ್ಯ ಪ್ರಚೋದನೆಗಳಾಗಲಿ, ಆಲೋಚನೆ, ಕಾರಣಗಳಾಗಲಿ ಇಲ್ಲದೆ ಇದ್ದಕ್ಕಿದ್ದಂತೆಯೇ ಕಿತ್ತು ಬರುವ ಹತೋಟಿಗೆ ನಿಲುಕದ ನಗು, ಜೊತೆಯೇ ಆನಂದ ಬಾಷ್ಪಗಳು ನನ್ನನ್ನು ಆವರಿಸಿಕೊಂಡವು. ನನ್ನಲ್ಲಿ ಈ ಸ್ಥಿತಿ ಹದಿನೈದು ನಿಮಿಷಗಳವರೆಗೆ ಮುಂದುವರಿಯಿತು. ನನ್ನ ಜೀವನದ ಇಂದಿನ ವರೆಗಿನ 66 ಸಂವತ್ಸರಗಳಲ್ಲಿ ಈ ಹಿಂದೆಂದೂ ನಾನು ಈ ಪರಿಯ ಆಹ್ಲಾದ ಮತ್ತು ಆನಂದಭಾಷ್ಪವನ್ನು ಅನುಭವಿಸಿರಲಿಲ್ಲ. ನನ್ನ ಪ್ರಶಾಂತತೆ ಮತ್ತು ಮನಃಸ್ಥಿತಿಗಳು ಈಗ ಸಂಪೂರ್ಣವಾಗಿ ಬದಲಾಗಿವೆ. ಆತ್ಮಸಾಕ್ಷಾತ್ಕಾರದಿಂದ ಚಿಮ್ಮುವ ಮುಕ್ತಿಯ ಅನುಭವದಿಂದಾಗಿ ಈ ನಗುವು ಮೂಡಿತು ಮತ್ತು ದೈವಸಾಕ್ಷಾತ್ಕಾರದಿಂದ ಹೊಮ್ಮುವ ಭಾವೋತ್ಕರ್ಷದಿಂದಾಗಿ ಆ ಆನಂದದ ಕಣ್ಣೀರು ಹರಿದು ಬಂತು ಎಂಬುವುದು ನನ್ನ ಅನಿಸಿಕೆ. ಗೀತೆ ಮತ್ತು ಕೃಪಾಸಾಂದ್ರನಾದ ಭಗವಂತನ ಮಹಾತ್ಮೆಯಿಂದ ನನ್ನಲ್ಲಿ ಈ ಪರಿಣಾಮಗಳು ಜಾಗೃತಗೊಂಡವು.

ಈ ಕೃತಿಯನ್ನು ಓದುವ ಪ್ರತಿಯೋರ್ವ ಓದುಗನೂ ಉನ್ನತ ವೈಯಕ್ತಿಕ, ವೃತ್ತಿಪರ ಹಾಗೂ ಆಧ್ಯಾತ್ಮಿಕ ಲಾಭಗಳನ್ನು ಅನುಭವಿಸುವನೆಂಬುವುದು ನನ್ನ ಸುದೃಢ ವಿಶ್ವಾಸ.ಎಳೆಯ ವಯಸ್ಸಿನಲ್ಲಿಯೇ ಆರಂಭಿಸುವವರಿಗೆ ಇದು ವಿಶೇಷವಾಗಿ ಲಾಭಪ್ರದವಾಗಿದೆ. ಆದ್ದರಿಂದ ಈ ಸಂಗ್ರಹವು ಶಾಲಾ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಅತಿ ಸೂಕ್ತವಾದುದು. ಭಗವದ್ಗೀತೆಯ ಕುರಿತು ಒಂದು ಘಂಟೆಯ ಉಪನ್ಯಾಸ ನೀಡುವುದಾದರೂ ಈ ಹೊತ್ತಗೆ ಉಪಯುಕ್ತ. ಯಾವುದೇ ವಯೋಮಾನದವರಾದರೂ ಸರಿ, ಎಂಥಹುದೇ ಪರಿಸ್ಥಿತಿಯಲ್ಲಿದ್ದರೂ ಸರಿ, ಯಾವ ಸಮಸ್ಯೆಯ ನಡುವೆಯೂ ಗೀತೆಯ ಈ ನುಡಿಗಳನ್ನು ಓದುತ್ತಿದ್ದಂತೆಯೇ ಓದುಗನು ಅರ್ಜುನನಂತೆಯೇ ತನ್ನೊಳಗಿನ ಭಯ, ಒತ್ತಡ, ದ್ವೇಷ, ಖಿನ್ನತೆ, ದುರಾಸೆಯೇ ಮೊದಲಾದ ಎಲ್ಲ ಪೈಶಾಚಿಕ ಗುಣಗಳಿಂದ ವಿಮುಕ್ತನಾಗಿ ದೈವೀ ಗುಣಗಳ ಆಪೂರವನ್ನು ಸವಿಯಬಹುದು. ಅವನು ಜೀವನದ ಕಠಿಣ ಸಂಗ್ರಾಮದಲ್ಲಿಯೂ ವಿಶ್ವಾಸದಿಂದ ಎದ್ದುನಿಂತು ತನ್ನ ಕರ್ತವ್ಯವನ್ನು ಅರಿತು, ದಕ್ಷತೆ ಮತ್ತು ಮಹೋತ್ಸಾಹದೊಂದಿಗೆ ಉನ್ನತ ಸಾಧನೆಗಳನ್ನು ಕೈಗೊಳ್ಳುವನು ಮತ್ತು ನಿಜವಾದ ಅರ್ಥದಲ್ಲಿ ಮೋಕ್ಷವನ್ನು ಹೊಂದುವನು.

ಇತ್ತೀಚೆಗೆ ನನ್ನನ್ನು ಭೇಟಿ ಮಾಡಿ ಗೀತೆಯ ಕುರಿತು ಚರ್ಚಿಸುತ್ತಿರುವ ಸಂದರ್ಭದಲ್ಲಿ ಗೀತೆಯ ಒಂದು ಹೊತ್ತಗೆಯನ್ನು ನನ್ನ ಕೈಯಲ್ಲಿಟ್ಟು ನಾನು ಆತ್ಮ ಮತ್ತು ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವಂತೆ ಆಶೀರ್ವದಿಸಿದ ತೆಲುಗು ಭಾಷೆಯಲ್ಲಿ 'ಶ್ರೀಮದ್ಭಗವದ್ಗೀತಾ ಮುಕ್ತಿ ಸೋಪಾನಮು – ತಾತ್ಪರ್ಯ ಸಹಿತ ವ್ಯಾಖ್ಯಾನಮು' ಎನ್ನುವ ಶೀರ್ಷಿಕೆಯಲ್ಲಿ ತಾತ್ಪರ್ಯ ಸಹಿತ ಸಂಪೂರ್ಣ ಗೀತಾನುವಾದಗೈದಿರುವ ಡಾ. ವಡ್ಡೆ ಶಿವಕೇಶವಂ ಮತ್ತು ಅವರ ಧರ್ಮಪತ್ನಿ, ಈ ದಿವ್ಯ ಚೇತನಗಳಿಗೆ ನಾನು ಅಪಾರ ವಂದನೆಗಳನ್ನು ಸಮರ್ಪಿಸುತ್ತೇನೆ. ತನಗಾಗಿ ಗೀತೆಯ ಸಂಕ್ಷಿಪ್ತ ಅನುವಾದ ರಚಿಸುವಂತೆ ಕೋರಿ ನನ್ನ ಈ ಕೃತಿಗೆ ಕಾರಣೀಭೂತನೆನಿಸುವ ನನ್ನ ಮಗ ಟಿ ಚಕ್ರಪಾಣಿ ಭಟ್ ಇವನಿಗೆ ಅಭಿನಂದನೆ. ಅತ್ಯಂತ ಸಂಕ್ಷಿಪ್ತವಾದ ಸಾರಾಂಶವನ್ನು ಹೊರತರುವಂತೆ ಒತ್ತಾಯಿಸಿ ಈ ಕೃತಿಯ ಕೊನೆಯಲ್ಲಿರುವ ಸುಂದರ ಶ್ಲೋಕಕ್ಕೆ ಸ್ಫೂರ್ತಿಯಾದ ನನ್ನ ಅಣ್ಣ ಡಾ. ಟಿ ನಾರಾಯಣ ಭಟ್ ಇವರಿಗೆ ನನ್ನ ಧನ್ಯವಾದಗಳು. ಈ ಕೃತಿಗೆ ಸುಂದರ ಪ್ರಸ್ತುತಿಯನ್ನು ನೀಡಿದ ನನ್ನ ಸೊಸೆ ಚಂದ್ರಿಕಾಳನ್ನು ಅಭಿನಂದಿಸುತ್ತೇನೆ; ಹಾಗೆಯೇ ಕನ್ನಡ ಭಾಷಾಂತರವನ್ನು ನನ್ನ ತಮ್ಮನ ಮಗಳು ಆಶಾ ದಾಸ್ ದಕ್ಷತೆಯಿಂದ ಮಾಡಿರುತ್ತಾಳೆ. ಕೊನೆಯ ಕರಡನ್ನು ಓದಿ ಸೂಕ್ತ ಸಲಹೆಗಳನ್ನಿತ್ತ ನನ್ನ ದೊಡ್ಡಣ್ಣ ಡಾ। ಶ್ರೀವೆಂಕಟರಮಣ ಅವರಿಗೆ ನನ್ನ ಪ್ರೀತಿಪೂರ್ವಕ ಗೌರವ ಸಲ್ಲುತ್ತದೆ.

ಈ ಸಂಗ್ರಹವನ್ನು ರಚಿಸುವ ಪೂರ್ವದಲ್ಲಿ ನಾನು ಹತ್ತು ಹಲವು ವಿದ್ವಾಂಸರ ಗೀತಾ ವ್ಯಾಖ್ಯಾನಗಳನ್ನು ಓದಿದ್ದೇನೆ. ವಿಶೇಷವಾಗಿ 'ಶ್ರೀಮದ್ಭಗವದ್ಗೀತೆ ತತ್ವ ವಿವೇಚನಿ'ಗಾಗಿ ಶ್ರೀ ಜಯದಯಾಲ್ ಗೋಯಂಕಾ, 'ಗೀತಾ ಮಕರಂದ'ಕ್ಕಾಗಿ ಸ್ವಾಮಿ ವಿದ್ಯಾಪ್ರಕಾಶಾನಂದ, 'ಭಗವದ್ಗೀತಾ ಎಸ್ ಇಟ್ ಈಸ್' ಗಾಗಿ ಸ್ವಾಮಿ ಪ್ರಭುಪಾದ, ಅಮಜ್ಹೊನ್ ನಲ್ಲಿ ಪ್ರಕಟಗೊಂಡಿರುವ http://bhagavadgitakannada.blogspot.com/ ವಿಷ್ಣುಪ್ರಿಯಾರವರಿಂದ ಸಂಪಾದಿಸಲ್ಪಟ್ಟಿರುವ ಪ್ರವಚನಗಳಿಗಾಗಿ ಬನ್ನಂಜೆ ಗೋವಿಂದಾಚಾರ್ಯ ಮತ್ತು 'ಭಗವದ್ಗೀತಾ ವ್ಯಾಸ ಮೀನಿಂಗ'ಕ್ಕಾಗಿ ಶ್ರೀ ಯೋಗಿ ಮನೋಹರ್ ಇವರುಗಳನ್ನು ಸ್ಮರಿಸುತ್ತೇನೆ.
ಸಂಕ್ಷಿಪ್ತತೆಗಳನ್ನು ಕಾಯ್ದುಕೊಳ್ಳಲು ಮತ್ತು ಅಸಂಗತತೆಯನ್ನು ದೂರ ಇಡಲು ವಿವರವಾದ ವ್ಯಾಖ್ಯಾನವನ್ನು ಮಾಡಿರುವುದಿಲ್ಲ. ಆತ್ಮ ಚಿಂತನೆಗೈದು, ವಿದ್ವಾಂಸರ ಕೃತಿಗಳನ್ನು ಓದಿ, ಬಲ್ಲಿದರನ್ನು ಯಾಚಿಸಿ, ತನಗೆ ಸೂಕ್ತವೆಂದೆನಿಸುವ ದಿಶೆಯಲ್ಲಿ ಆತ್ಮಾವಲೋಕನ ನಡೆಸುವ ರಾಜಮಾರ್ಗವು ಓದುಗನಿಗೆ ತೆರೆದಿರುವುದು.

ಎಲ್ಲ ಶ್ಲೋಕಗಳ ಆಡಿಯೋ ಆವೃತ್ತಿಯನ್ನು ಲೇಖಕನ ವಾಣಿಯಲ್ಲಿ ಈ ಪುಸ್ತಕದ ಜೊತೆ http://tbalakrishnabhat.wix.com/books, ಇಲ್ಲಿ ಅಡಕಗೊಳಿಸಲಾಗಿದೆ.

ಈ ಪುಸ್ತಕದ ಕುರಿತು ನಿಮ್ಮ ಸಲಹೆಗಳಿಗೆ ನಾವು ಋಣಿಗಳು. ದಯಮಾಡಿ tbalakrishnabhat@gmail.comನಲ್ಲಿ ಕಳುಹಿಸಿ.

ವಿಷು ಸಂಕ್ರಮಣ, 2016

ಡಾ। ಟಿ. ಬಾಲಕೃಷ್ಣ ಭಟ್

# ಪರಿಚಯ

ಮುಖಪುಟದಲ್ಲಿರುವ ಚಿತ್ರವು ಗೀತೆಯ ಮಾರ್ಗವನ್ನು ಸಂಕ್ಷೇಪಿಸುತ್ತದೆ. ಯಾವುದೇ ಸಮಸ್ಯೆಯ ಕುರಿತು ಒಂದು ನಿಖರವಾದ ಹಿಡಿತವನ್ನು ಗಳಿಸಲು, ಸಮಸ್ಯೆಯನ್ನು ಗ್ರಹಿಸಲು ಮತ್ತು ಪರಿಹರಿಸಲು – ನಾವು ಕೈಯಲ್ಲಿರುವ ಐದು ಬೆರಳುಗಳನ್ನು ನಮ್ಮ ಕೆಲಸಗಳಿಗೆ ಬಳಸುವಂತೆ – ಐದು ಮುಖ್ಯ ಸಾಧನಗಳನ್ನು ರಚಿಸಿ, ಅಭಿವೃದ್ಧಿಗೊಳಿಸಿ ಬಳಸಬೇಕಾಗುತ್ತದೆ: ಮೊದಲನೆಯದಾಗಿ ಸಮಸ್ಯೆಯ ಕುರಿತು ಸಾಮಾನ್ಯ ಜ್ಞಾನವನ್ನು ಸಾಹಿತ್ಯದ ಸಹಾಯದಿಂದ ಮತ್ತು ತತ್ಸಮಾನ ಸಮಸ್ಯೆಯಲ್ಲಿ ಪಳಗಿರುವವರಿಂದ ಗಳಿಸುವುದು, ಎರಡನೆಯದಾಗಿ ಸಮಸ್ಯೆಯ ವಿಷಯವನ್ನು ಜೀರ್ಣಿಸಿಕೊಳ್ಳುವುದು, ಮೂರನೆಯದಾಗಿ ಸಮಸ್ಯೆಯನ್ನು ಬಗೆಹರಿಸಲು ಆಳವಾದ ಭಕ್ತಿಯನ್ನು ಹೊಂದುವುದು, ನಾಲ್ಕನೆಯದಾಗಿ ಬದ್ಧತೆ ಮತ್ತು ಹುರುಪಿನಿಂದ ಕೂಡಿದ ಚಟುವಟಿಕೆಯನ್ನು ನಡೆಸುವುದು ಹಾಗೂ ಕೊನೆಯದಾಗಿ ತನ್ನೊಳಗೆ ಮತ್ತು ಇತರರೊಡನೆ ಆಪ್ಯಾಯಮಾನವಾದ, ಒತ್ತಡರಹಿತವಾದ ಸ್ಥಿತಿಯನ್ನು ಉಳಿಸಿಕೊಳ್ಳುವುದು. ಒಬ್ಬ ವ್ಯಕ್ತಿಯು ತನಗೆ ಪ್ರಗತಿ ಅಸಾಧ್ಯವೆಂದೆನಿಸಿದಾಗಲೆಲ್ಲ ಈ ಮೇಲಿನ ಐದು ಘಟಕಗಳಲ್ಲಿ ಅಥವಾ ಸಾಧನಗಳಲ್ಲಿ ಯಾವವುಗಳನ್ನು ಇನ್ನೂ ಉತ್ತಮ, ಹರಿತು ಮತ್ತು ಬಲವರ್ಧನೆಗೊಳಪಡಿಸುವುದು ಅಗತ್ಯ ಎಂಬುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು ಮತ್ತು ತದನುಸಾರ ವರ್ತಿಸಬೇಕು. ಇನ್ನು ಗೆಲುವು ಖಚಿತವಾಗಿ ಹಿಂಬಾಲಿಸುವುದು.

ಈ ರೀತಿಯಲ್ಲಿ ಓರ್ವನು ಕಬ್ಬಿಣದ ಕಡಲೆಯೋ ಎಂದೆನಿಸುವ ಆತ್ಮ ಸಾಕ್ಷಾತ್ಕಾರ ಮತ್ತು ದೈವ ಸಾಕ್ಷಾತ್ಕಾರವನ್ನು ಕೂಡ ಸಾಧಿಸಬಹುದು. ಜೊತೆಗೆ ಪ್ರತಿಕೂಲತೆಗಳ ನಡುವೆಯೂ ಅರ್ಜುನನಂತೆ ಸ್ವಧರ್ಮ ಪಾಲನೆಯನ್ನು ಪೂರೈಸಬಹುದು.

ಈ ಸಂದರ್ಭದಲ್ಲಿ ವಿಭಾಗ 2 ರಲ್ಲಿ ನೀಡಿರುವ 4 ಪ್ರಬಲ ಶ್ಲೋಕಗಳಲ್ಲಿ ಇರುವ ಸಂಕ್ಷಿಪ್ತ ಮಾರ್ಗದರ್ಶನವು ಎಲ್ಲ ಪರಿಸ್ಥಿತಿಗಳಲ್ಲಿ ಹಾಗೂ ಎಂತೆಂಥಹ ಸಮಸ್ಯೆಗಳಲ್ಲಿಯೂ, ಎಲ್ಲರಿಗೂ, ಎಲ್ಲ ಕಾಲಕ್ಕೂ ಅನ್ವಯಿಸುವಂತಹುದು.

ಆತ್ಮನ ಸಾಕ್ಷಾತ್ಕಾರ ಮತ್ತು ದೈವದ ಸಾಕ್ಷಾತ್ಕಾರ ಇವೆರಡೂ ಅನುಕೂಲವಾಗುವಂತೆ 3.1 ನೆಯ ಉಪವಿಭಾಗವು ಮೊಟ್ಟಮೊದಲಿಗೆ ಆತ್ಮನ ಬಗೆಗೆ ನಿರ್ದಿಷ್ಟ ಮತ್ತು ನಿಖರ ಮಾಹಿತಿಯನ್ನು ಪೂರೈಸುತ್ತದೆ: ಆತ್ಮನು ಏನಾಗಿದ್ದಾನೆ, ಎಲ್ಲಿಂದ ಬಂದಿದ್ದಾನೆ, ಎಲ್ಲಿಯವರೆಗೆ ಜೀವಂತವಾಗಿರುತ್ತಾನೆ ಮತ್ತು ಪರಮಾತ್ಮನ ಜೊತೆಗೆ ಯಾವ ರೀತಿಯ ಸಂಬಂಧ ಉಳ್ಳವನಾಗಿದ್ದಾನೆ ಎಂಬುದರ ಕುರಿತು ಜ್ಞಾನವನ್ನು ಒದಗಿಸುತ್ತದೆ. 3.2 ನೆಯ ಉಪವಿಭಾಗವು ದೇವರ ಕುರಿತು; ಅವನು ಏನನ್ನು ಮಾಡುವನು ಮತ್ತು ಮಾಡುವುದಿಲ್ಲ, ಅವನು ಎಲ್ಲಿ ಕಂಡುಬರುತ್ತಾನೆ ಮತ್ತು ಚುಟುಕಾಗಿ ಹೇಗೆ ಕಾಣಸಿಗುತ್ತಾನೆ ಎಂಬ ವಿಷಯದಲ್ಲಿ ಜ್ಞಾನವನ್ನು ನೀಡಲಾಗಿದೆ. 3.3 ನೆಯ ಉಪವಿಭಾಗದಲ್ಲಿ ಯಾವುದರ ಉಪಯೋಗವನ್ನು ಪಡೆಯಲು, ಅದಾಗಿಯೂ ಅದನ್ನು ಕಂಡುಕೊಳ್ಳಲು ಮತ್ತು ಮೀರಿ ಮುಂದೆ ಸಾಗಿ ಗುರಿಯನ್ನು ತಲುಪಲು ಅನುಕೂಲವಾಗುವಂತೆ ಯಾವುದರಲ್ಲಿ ನಮನ್ನು ಹುದುಗಿಸಲಾಗಿದೆಯೋ ಆ ಪ್ರಕೃತಿಯನ್ನು ವಿಶ್ಲೇಷಿಸಲಾಗಿದೆ. ಜನನ ಮರಣದ ಚಕ್ರದ ಸ್ಪಷ್ಟ ವಿಶ್ವಾಸಾರ್ಹ ಚಿತ್ರಣವನ್ನು 3.4 ಉಪವಿಭಾಗ ದಲ್ಲಿ ನೀಡಲಾಗಿದೆ. ಇದರಿಂದ ನಮ್ಮ ಕೈಯಲ್ಲಿರುವ ಭವ್ಯವಾದ ಕೆಲಸದಲ್ಲಿ ಯಶಸ್ವಿಯಾಗಲು ಅತ್ಯಾವಶ್ಯಕವಾಗಿರುವ ಭಯ ಮುಕ್ತ, ಸ್ಥಿರ ನಿಯೋಜಿತ ವೇದಿಕೆಯತ್ತ ನಮ್ಮನ್ನು ಕೊಂಡೊಯ್ಯುವಂಥಹ, ಸಮಯದೊಂದಿಗೆ ಅವಿಭಾಜ್ಯವಾದ ಅನಂತ ದೃಷ್ಟಿಕೋನವನ್ನು ನಾವು ಹೊಂದಬಹುದು. 4 ನೆಯ ವಿಭಾಗವು ಕರ್ಮ, ಕರ್ಮ ಶಕ್ತಿ ಮತ್ತು ಕರ್ಮಫಲದ ಕುರಿತು ನಮ್ಮ ಮನೋಭಾವ ಮತ್ತು ನಮ್ಮ ಪರಿಪೂರ್ಣ, ಭಕ್ತಿಸಂಪನ್ನ, ಅಚಲ ಏಕಾಗ್ರ ಗಮನವನ್ನು ಹರಿಸಲೋಸುಗ ಒಂದು ತೆರನಾದ ಧ್ಯಾನಸ್ಥ ಸ್ಥಿತಿಯನ್ನು ತಲುಪುವ ಅಗತ್ಯತೆ ಮತ್ತು ವಿಧಾನವನ್ನು ತಿಳಿಸುತ್ತದೆ.

## ಪರಿಚಯ

5 ನೆಯ ವಿಭಾಗವು ಭಕ್ತಿ ಮತ್ತು ದೈವಕೃಪೆಯ ಕುರಿತಾಗಿದೆ. ಯಾವುದೇ ವಿಷಯದಲ್ಲಿ ಭಕ್ತಿಯು ಸ್ವಯಂ ವೃದ್ಧಿಸುವ ಗುಣವನ್ನು ಹೊಂದಿರುತ್ತದೆ; ಇದು ಪ್ರಕೃತಿಯ ವಿಧಾನ, ಇಲ್ಲವೇ ದೈವ ವಿಧಾನ. ಇದು ಸ್ವಯಂ ವೃದ್ಧಿಸಿ ಬಲಗೊಳ್ಳುವ ಪರಮಾಣು ಸರಣಿ ಪ್ರಕ್ರಿಯೆಯಂತೆ. ಕೆಲಸದ ಬಗೆಗಿನ ಶ್ರದ್ಧೆಯು ದೈವ ಕೃಪೆ ಮತ್ತು ಕೆಲಸದ ಅನುಗ್ರಹವನ್ನು ಈಯುವುದು. ಸರ್ವರ ಕೃಪೆ ಮತ್ತು ಕೆಲಸದ ಜೊತೆಗೂಡಿರುವ ಎಲ್ಲ ಘಟಕಗಳ ಕೃಪೆಯು ಪ್ರತಿ ಸಂದರ್ಭದಲ್ಲಿಯೂ ಪ್ರತ್ಯೇಕ ತೆರವುಗಳಲ್ಲಿಯೂ ಪ್ರಕಾಶಿಸಿ ಪ್ರತಿಯೊಬ್ಬರನ್ನು ಮತ್ತು ನಿಗದಿತ ಉದ್ದೇಶವನ್ನು ಶೋಭಾಯಮಾನವಾಗಿ ಬೆಳಗಿಸುವುದು. ದೈವ ಸಾಕ್ಷಾತ್ಕಾರದಂತಹ ಅಮೂರ್ತ ವಿಷಯಗಳಲ್ಲಿ ಕೃಪೆಯು ಆವಶ್ಯಕವಾಗಿರುವುದು. ಹಿತವಾದ ಸನ್ನಡತೆಯನ್ನು ಕಾಯ್ದುಕೊಳ್ಳುವುದು ಕೃಪೆಯ ಸಾಧನೆಗೆ ಅತಿ ಪ್ರಬಲ ತಪೋ ಅಸ್ತ್ರ. ತನ್ನ ಯೋಗ–ಕ್ಷೇಮದ ಚಿಂತೆಯನ್ನು ತ್ಯಜಿಸುವುದರಿಂದ ತನ್ನನ್ನು ಮುಂದುವರಿದು ನಿರ್ಬಂಧಗಳನ್ನು ಜಯಿಸಿ ಸ್ವತಂತ್ರರಾಗಿ ತನ್ನ ಅಂತರಾತ್ಮನನ್ನು ಮತ್ತು ಪರಮಾತ್ಮನನ್ನು ಸಂಪೂರ್ಣವಾಗಿ ದರ್ಶಿಸಲು ಅನುಕೂಲವಾಗುತ್ತದೆ.

6 ನೆಯ ವಿಭಾಗವು ಗೀತೆಯ ಮುಖೇನ ತನ್ನ ಸಮಸ್ಯೆಗಳನ್ನು ಮೀರಿ, ತನ್ನ ದಾರಿಯನ್ನು ಕಂಡುಕೊಂಡು ಆತ್ಮ ಮತ್ತು ದೈವ ಸಾಕ್ಷಾತ್ಕಾರದಲ್ಲಿ ವಿಜಯಿಯಾದವನ ಹರ್ಷೋತ್ಕರ್ಷವನ್ನು ಸೂಚಿಸುತ್ತದೆ. ಈಗ ನಮ್ಮಲ್ಲಿ ಪ್ರತಿಯೊಬ್ಬರೂ ಅಂಥಹ ಸ್ಥಿತಿಯನ್ನು ತಲುಪಬಹುದು. ಇಲ್ಲಿ ವಿಶ್ಲೇಷಿಸಲಾದ ಆಂತರಿಕ ಪ್ರಕ್ರಿಯೆಯ ಅತ್ಯಂತ ಸೂಕ್ಷ್ಮ ವಿವರಗಳು ಎಲ್ಲ ಕಡೆಯೂ ಅನ್ವಯಿಸುತ್ತವೆ.

7 ನೆಯ ವಿಭಾಗವು, 2 ನೆಯ ವಿಭಾಗದಂತೆ, ಸಮಸ್ಯೆಗಳ ಪರಿಹಾರದಲ್ಲಿ ಅಥವಾ ಸವಾಲುಗಳನ್ನು ಎದುರಿಸುವಲ್ಲಿ ಜೀವನದ ಎಲ್ಲ ಹಂತಗಳಲ್ಲಿಯು ಮತ್ತು ಎಲ್ಲ ಕಾಲದಲ್ಲಿಯು ಸಾರ್ವತ್ರಿಕವಾಗಿ ಅನ್ವಯಿಸುತ್ತದೆ. ದೇವರುಗಳಾಗಿ – ದೇವರಂತೆ – "ಪರಸ್ಪರಂ ಭಾವಯಂತಹ" (3- 11) ಪರಸ್ಪರ ಮೇಲೆತ್ತುತ್ತ, ಯೋಗಿಗಳಂತೆ ಬಾಳಿದಲ್ಲಿ (6.46) ಈ ಸಂಪೂರ್ಣ ಬ್ರಹ್ಮಾಂಡದಲ್ಲಿ ಒಬ್ಬಾತನು ಹಿಡಿತ ಸಾಧಿಸಲು, ಬಗೆಹರಿಸಲು, ಕಂಡುಹಿಡಿಯಲು, ಸೃಷ್ಟಿಸಲು ಅಥವಾ ಹೊಂದಲು ಅಸಾಧ್ಯವೆಂದೆನಿಸುವ ವಸ್ತು ಒಂದಿಲ್ಲ.

# ಗೀತೆಯ ಸಂಕ್ಷಿಪ್ತ ಸಂಗ್ರಹ

## 1. ಪ್ರಾರ್ಥನೆ

ಅರ್ಜುನನು ಶ್ರದ್ಧಾಪೂರ್ವಕನಾಗಿ ಬೇಡಿಕೊಳ್ಳುತ್ತಾನೆ

**ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ॥**
**ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ॥1-30॥**

ಹೇ ಕೇಶವ, ನಾನು ದೃಢವಾಗಿ ನಿಂತುಕೊಂಡು ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಅಸಮರ್ಥನಾಗಿದ್ದೇನೆ. ನನ್ನ ಮನಸ್ಸು ಭ್ರಾಂತಿಗೊಂಡು ಗೊಂದಲದಲ್ಲಿ ಸಿಲುಕಿಕೊಂಡಿದೆ. ಗಲಿಬಿಲಿಗೊಂಡಿರುವುದು ಮಾತ್ರವಲ್ಲದೆ ತಲೆಯು ಗಿರ್ರನೆ ಸುತ್ತುತ್ತಿದೆ. ತಲೆಸುತ್ತುವಂತೆ ಭಾಸವಾಗಿ ಯೋಚಿಸುವುದು ಅಶಕ್ಯವೆನಿಸುತ್ತಿದೆ. ನಾನು ಹಲವು ಋಣಾತ್ಮಕ ಚಿಹ್ನೆ, ಉದ್ದೇಶ, ಸೂಚನೆ, ಗುರುತು, ಸಂಕೇತಗಳನ್ನು ಕಾಣುತ್ತಿದ್ದೇನೆ ಮತ್ತು ನನಗೆ ಅಪಶಕುನಗಳು ಗೋಚರಿಸುತ್ತಿವೆ. [2] (1-30)

## 2. ಸಂಕ್ಷಿಪ್ತ ಮಾರ್ಗದರ್ಶನ

ಭಗವಂತ ಶ್ರೀಕೃಷ್ಣ ಉತ್ತರಿಸಿದನು

**ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ।**
**ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥2-3॥**

ಎಲೈ ಪಾರ್ಥ ನೀನು ಹೇಡಿಯಾಗಬೇಡ. ಇದು ನಿನಗೆ ಒಪ್ಪುವಂತಹುದಲ್ಲ. ಶತ್ರುಗಳನ್ನು ದಹಿಸುವವನಾದ ನೀನು ಈ ನಿನ್ನ ಮನೋದೌರ್ಬಲ್ಯವನ್ನು ತ್ಯಜಿಸಿ ಎದ್ದುನಿಂತು ಕರ್ತವ್ಯ ಪಾಲನೆಗೆ ಮುಂದಾಗು. (2-3)

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥4-34॥**

---

[2] ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಖಿನ್ನಗೊಳಿಸುವ, ಭೀತಿಗೊಳಪಡಿಸುವ, ಅನಿಶ್ಚಿತತೆ ಮೂಡಿಸುವ ಮತ್ತು ಹತಾಶರನ್ನಾಗಿಸುವ ಪರಿಸ್ಥಿತಿಗಳನ್ನು ಸಂಧಿಸುತ್ತೇವೆ. ಇಂತಹ ಸನ್ನಿವೇಶಗಳನ್ನು ಸಮರ್ಥರಾಗಿ ನಿಭಾಯಿಸಿ ಜಯಿಸುವುದನ್ನು ಮತ್ತು ಇನ್ನೂ ಉತ್ತಮವೆಂದರೆ ಇವುಗಳಿಂದ ದೂರವಿರುವುದನ್ನು ರೂಢಿಮಾಡಿಕೊಳ್ಳುವುದು ಒಳಿತು. ಯಾವೊಬ್ಬನೂ ಕೂಡ ಈ ಮೇಲಿನ ಪ್ರಾರ್ಥನೆಯಂತೆ ಇತರ ಯಾವುದೇ ಪ್ರಾರ್ಥನೆ, ಪ್ರಶ್ನೆ ಅಥವಾ ತನ್ನ ಆಧ್ಯಾತ್ಮಿಕ ಅನ್ವೇಷಣೆ, ಆರೋಗ್ಯ, ಸಂಪತ್ತು, ಸಂಬಂಧ, ಅಧ್ಯಯನ, ಆಡಳಿತ, ವಿಜ್ಞಾನ, ವೃತ್ತಿ, ವ್ಯವಹಾರ, ರಾಜಕೀಯ, ಪ್ರಕೃತಿ, ವ್ಯಕ್ತಿ ಅಥವ ಸಮಷ್ಟಿಗಳ ಕುರಿತಾಗಿ, ಒಬ್ಬಾತನ ವಯಸ್ಸು, ಲಿಂಗ, ಧರ್ಮ ಅಥವಾ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಗಣಿಸದೆ ಇಲ್ಲಿ ಪ್ರಸ್ತುತ ಪಡಿಸಿದ 46+1 ಶ್ಲೋಕಗಳಲ್ಲಿ ಉತ್ತರವನ್ನು ಕಂಡುಕೊಳ್ಳಬಹುದು.

ನೀನು ಜ್ಞಾನಿಗಳಿಗೆ ಶರಣು ಹೊಕ್ಕು ಅವರನ್ನು ಸಾದರವಾಗಿ ಪ್ರಶ್ನಿಸು ಮತ್ತು ಅವರ ಸೇವೆಯನ್ನು ಮಾಡು. ಇದರಿಂದ ನೀನು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವೆ. ಜ್ಞಾನಿಗಳು ಮತ್ತು ತತ್ವದರ್ಶಿಗಳು ನಿನಗೆ ಉಪದೇಶವನ್ನು ನೀಡಬಲ್ಲರು. (4-34)

**ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ।**
**ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ॥4-39॥**

ಓರ್ವ ಆತ್ಮಸಂಯಮಿ, ಶ್ರದ್ಧಾಪೂರ್ಣ ಮತ್ತು ಸಮರ್ಪಿತ ವ್ಯಕ್ತಿಯು ಶೀಘ್ರವಾಗಿ ಜ್ಞಾನವನ್ನು ಸಂಪಾದಿಸಿ ದೈವೀ ಶಾಂತಿಯನ್ನು ಹೊಂದುವನು. (4-39)

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।**
**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ॥6-5॥**

ಒಬ್ಬಾತ ತನ್ನ ಸ್ವಪ್ರಯತ್ನದಿಂದ ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ತನ್ನನ್ನು ಎಂದೂ ಕೀಳಾಗಿ ನೋಡಬಾರದು. ತನ್ನ ಮನಸ್ಸೇ ತನಗೆ ಆಪ್ತನು ಮತ್ತು ಅದುವೇ ತನಗೆ ಶತ್ರುವೂ ಆಗಿರುವುದು. (6-5)

## 3. ಜ್ಞಾನ ದರ್ಶನ

### 3.1 ಆತ್ಮ ದರ್ಶನ

**ನ ತ್ವೇವಾಹಂ ಜಾತು ನಾಸಂ ನತ್ವಂ ನೇಮೇ ಜನಾಧಿಪಾಃ।**
**ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಮ್॥2-12॥**

ಈ ಹಿಂದೆ ನಾನು ಇಲ್ಲದಿದ್ದ ಸಮಯವಿಲ್ಲ. ನೀನೂ, ಈ ರಾಜರುಗಳೂ ಇರಲಿಲ್ಲವೆಂಬ ಸಮಯವಿಲ್ಲ. ಮುಂದೆಯೂ ನಾವುಗಳು ಇರದ ಸಮಯವು ಬರುವುದಿಲ್ಲ. (2-12)

**ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್।**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ॥2-17॥**

ಶರೀರವನ್ನು ಆವರಿಸಿಕೊಂಡಿರುವ ಆತ್ಮನು ಅವಿನಾಶಿಯಾಗಿರುವನು ಎಂದು ತಿಳಿ. ವಿಕಾರವನ್ನು ಹೊಂದದ, ಶಾಶ್ವತವಾದ ಅಸ್ತಿತ್ವವನ್ನು ಹೊಂದಿರುವ ಇವನನ್ನು ಯಾರೂ ನಾಶಪಡಿಸಲಾಗುವುದಿಲ್ಲ. (2-17)

**ಮಮೈವಾಂಶೋ ಜೀವಲೋಕೇ ಜೀವ ಭೂತಃ ಸನಾತನಃ।**
**ಮನಃ ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ॥15-7॥**

ಜೀವಜಗತ್ತಿನಲ್ಲಿರುವ ಜೀವಿಗಳೆಲ್ಲರೂ ನನ್ನ ಶಾಶ್ವತ ಅಂಶಗಳಾಗಿವೆ. ಇವು ಮನಸ್ಸೂ ಸೇರಿದಂತೆ ಪ್ರಕೃತಿಯಲ್ಲಿ ಸ್ಥಾಯಿಯಾಗಿ ನೆಲೆಸಿರುವ ಆರು ಇಂದ್ರಿಯಗಳನ್ನು ತಮ್ಮೆಡೆಗೆ ಆಕರ್ಷಿಸುತ್ತವೆ. (15-7)

**3.2 ಭಗವತ್ ದರ್ಶನ** **( ವಿಶೇಷ ಟಿಪ್ಪಣಿಯನ್ನು ಗಮನಿಸಿ)*

**ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ।**
**ನ ಕರ್ಮಫಲ ಸಂಯೋಗಂ ಸ್ವಭಾವಸ್ತು ಪ್ರವರ್ತತೇ॥5-14॥**

ದೇವರು ಏನನ್ನೂ ಮಾಡುವನೆಂಬುವುದಿಲ್ಲ. ಆತನು ಎನನ್ನೂ ಮಾಡಿಸುವನೆಂಬುದಿಲ್ಲ. ಅಥವಾ ಅವನು ಕರ್ಮಫಲಗಳನ್ನು ನೀಡುವವನೂ ಅಲ್ಲ. ಇವೆಲ್ಲವೂ ಪ್ರಕೃತಿಯಲ್ಲಿ ಸಹಜವಾಗಿ ನಡೆಯುವಂಥವು. (5-14)

**ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ।**
**ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ॥5-15॥**

ದೇವರು ಯಾರಿಗೂ ಪಾಪ ಅಥವಾ ಪುಣ್ಯಗಳನ್ನು ಹಂಚುವುದಿಲ್ಲ ಇಲ್ಲವೇ ಯಾರ ಪಾಪ ಪುಣ್ಯಗಳನ್ನೂ ಸ್ವೀಕರಿಸುವುದಿಲ್ಲ. ಅಜ್ಞಾನದಿಂದಾಗಿ ಜೀವಾತ್ಮರು ತಮನ್ನು ತಾವೇ ಮೂರ್ಖರನ್ನಾಗಿಸುತ್ತಾರೆ (ಭಗವಂತನು ಈ ರೀತಿ ಮಾಡುವನೆಂದು ಭ್ರಮಿಸಿ). (5-15)

**ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್।**
**ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಂ॥9-18॥**

ಭಗವಂತನು ಸರ್ವಸ್ವದ ಧ್ಯೇಯ, ಆಧಾರ, ಒಡೆಯ, ಸಾಕ್ಷಿ, ನೆಲೆ, ಆಶ್ರಯ, ಆಪ್ತಮಿತ್ರ, ಆದಿ ಮತ್ತು ಅಂತ್ಯ, ವಿಶ್ರಾಂತಿಯ ತಾಣ, ಖಜಾನೆ ಹಾಗೂ ಕ್ಷೀಣವಾಗದ ಮೂಲಬೀಜವಾಗಿದ್ದಾನೆ. (9-18)

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥4-7॥**

ಯಾವಾಗ ಸಾಂವಿಧಾನಿಕ, ಮೂಲಭೂತ, ಅವಶ್ಯಕ ಕಾರ್ಯಗತ ತತ್ವಗಳು ಮತ್ತು ಸದಾಚಾರಗಳಿಗೆ (ಧರ್ಮ) ಚ್ಯುತಿಯುಂಟಾಗುವುದೋ, ಅಧರ್ಮದ ಬಲ ಮೇಲಾಗುವುದೋ ಆವಾಗಲೆಲ್ಲ ನಾನು (ಪರಿಸ್ಥಿತಿಯನ್ನು ನಿಯಂತ್ರಿಸಲು) ಅವತಾರವನ್ನೆತ್ತುವೆನು. (4-7)

## Thank You for previewing this eBook

You can read the full version of this eBook in different formats:

- HTML (Free /Available to everyone)
- PDF / TXT (Available to V.I.P. members. Free Standard members can access up to 5 PDF/TXT eBooks per month each month)
- Epub & Mobipocket (Exclusive to V.I.P. members)

To download this full book, simply select the format you desire below

Free-Ebooks.net